KANNADA

ಚಿಕ್ಕ ಹುಲಿ

ಕತೆ ಮತ್ತು ಚಿತ್ರಗಳುಃ ಸುಪರ್ಣಾ ಸಿನ್ಹಾ

ಏಕಲವ್ಯ ಪ್ರಕಾಶನ

ಚಿಕ್ಕ ಹುಲಿ

ಕತೆ ಮತ್ತು ಚಿತ್ರಗಳುಃ
ಸುಪರ್ಣಾ ಸಿನ್ಹಾ

ಏಕಲವ್ಯ ಪ್ರಕಾಶನ

ಚಿಕ್ಕ ಹುಲಿ

Chikka Huli

Story and Pictures: Supurna Sinha
Cover Design: Rakesh Khatri
Kannada Translation: Prabhakar Nanawaty

This Kannada translation is supported by the Parag Initiative of Tata Trusts.

May 2018 / 1000 copies
March 2024 / 2000 copies
Paper: 100 gsm Maplitho and 220 gsm Paper board (Cover)
ISBN: 978-93-85236-64-8
Price: ₹ 80.00

Published by:
EKLAVYA FOUNDATION
Jamnalal Bajaj Parisar
Near Fortune Kasturi, Jatkhedi,
Bhopal - 462 026 (MP)
Phone: +91 755 - 297 7770, 71, 72
www.eklavya.in / books@eklavya.in

Printed at: Box Corogrators & Offsets Printers, Bhopal, Phone +91 755 258 7551

ಅರ್ಪಣೆ

ಅಪರಿಚಿತ ದಾರಿಯನ್ನು ತುಳಿಯಲು ಧೈರ್ಯ ಮತ್ತು ಉತ್ತೇಜನೆ ಕೊಟ್ಟ ನನ್ನ
ತಂದೆ, ಸುರಜಿತ ಸಿನ್ಹಾ ಇವರಿಗೆ

ಮುನ್ನುಡಿ

ಮಕ್ಕಳು ಪ್ರಾಣಿಗಳನ್ನು ಪ್ರೀತಿಸುತ್ತಾರೆ. ತಮ್ಮ ಸುತ್ತಮುತ್ತಲು ಓಡಾಡುತ್ತಿರುವ – ಇಣಚಿ, ಬೆಕ್ಕು, ಇರುವೆ, ಬೀದಿ ನಾಯಿಗಳು – ಮುಂತಾದ ಪ್ರಾಣಿಗಳ ಬೆನ್ನು ಹತ್ತಿ ಹೋಗುವದು ಇಲ್ಲವೆ ಹಿಡಿಯಲು ಪ್ರಯತ್ನಿಸುವದು, ಅವುಗಳ ಹೊಟ್ಟೆ ಸವರುವದು ಮಂತಾದವುಗಳಲ್ಲಿ ಅವರಿಗೆ ಸಾಹಸ ಮಾಡಿದಂತೆ ಅನ್ನಿಸುತ್ತದೆ. ಇವರಿಗೆ ಕಾಡು ಪ್ರಾಣಿಗಳನ್ನು – ಹುಲಿ, ಆನೆ, ಸಿಂಹ ಮುಂತಾದವುಗಳನ್ನು - ಪ್ರತ್ಯಕ್ಷವಾಗಿ ನೋಡಿದಾಗ ಬಹು ಅಚ್ಚರಿಯಾಗುತ್ತದೆ. ಏಕೆಂದರೆ ಇಂತಹ ಪ್ರಾಣಿಗಳು ಚಿತ್ರ ಇಲ್ಲವೆ ಪ್ರಾಣಿಸಂಗ್ರಹಾಲಯದಲ್ಲಿ ಅಷ್ಟೇ ಕಾಣಬರುತ್ತವೆ.
ಅವರ ಫಲವತ್ತಾದ ಕಲ್ಪನೆಯ ಜಗತ್ತಿನಲ್ಲಿ .ಮನೆಯ ಹಿಂದಿನ ಹಿತ್ತಲುತೋಟ ಕಾಡಾರಣ್ಯವಾಗುತ್ತದೆ. ಹಾಗು ಮನೆಯ ಬೆಕ್ಕು ಹುಲಿಯಾಗುತ್ತದೆ.

ಈ ಕತೆಯಲ್ಲಿಯ ಒಂದು ಚಿಕ್ಕ ಹುಡುಗಿ, ರೋಶನಿ, ಬೆಕ್ಕನ್ನೇ ಹುಲಿಯಂದು ನಂಬಿ ಕಲ್ಪನೆಯ ಜಗದಲ್ಲಿ ವಿಹರಿಸುತ್ತಾಳೆ. ಈ ಚಿಕ್ಕ ಹುಲಿ-ಬಾಘಾ- ಅಬ್ಬರಿಸಿದಾಗ ಅಡವಿಯಲ್ಲಿಯ ಉಳಿದ ಪ್ರಾಣಿಗಳೆಲ್ಲ ಅಂಜಿ ಚೆಲ್ಲಾಪಿಲ್ಲಿಯಾಗಿ ಸುರಕ್ಷಿತವಾದ ಗವಿಗಳಲ್ಲಿ ಅಡಗಿ ಕೂಡುತ್ತವೆ. ಪ್ರಾಣಿಗಳಿಗೆ ಯಾರಿಗೂ ಕಾಣದ ಹಾಗೆ ತಮ್ಮ ಮೇಲಿನ ಸಂಕಟ ದೂರವಾಗುವವರೆಗೆ ಮರೆಯಲ್ಲಿ ಅಡಗುವ ತಿಳಿವಳಿಕೆ ಇರುತ್ತದೆ.

ಮಕ್ಕಳು ಹಿರಿಯರ ಅನುಕರಣೆ ಮಾಡಿದಂತೆ ಈ ಚಿಕ್ಕ ಹುಲಿ ಅಡವಿಯಲ್ಲಿಯ ಪ್ರಾಣಿಗಳನ್ನು ತನ್ನ ಅರ್ಭಟೆಯಿಂದ ಅಂಜಿಸಬಹುದೇ?

ಮಕ್ಕಳು ಈ ಕತೆಯಿಂದ ನಾವು ಕೂಡ ಪ್ರಾಣಿಗಳ ಹಾಗೆಯೇ ಇದ್ದೇವೆ ಎಂಬುದನ್ನು ಕಲಿಯಬಹುದು. ಚಿಕ್ಕವರೆಲ್ಲ ದುರ್ಬಲರಿರುತ್ತಾರೆ. ಹಾಗು   ತಾಯಿ ಅವರ ಜೋಪಾಸನೆ ಮಾಡುತ್ತಾಳೆ.
ಚಿಕ್ಕವರು ದೊಡ್ಡವರಾದಾಗ ಹಿರಿಯರ ಅನುಕರಣೆ ಮಾಡುತ್ತಾರೆ. ಈ ಅನುಕರಿಸುವ ಹೋರಾಟದ ಬಗೆಯಿಂದಾಗಿ ಚಿಕ್ಕವರು ದೊಡ್ಡವರಾಗಿ ಜಗತ್ತಿನಲ್ಲಿ ತಮ್ಮ ಸ್ಥಾನವನ್ನು ಗಟ್ಟಿ ಪಡಿಸುತ್ತಾರೆ. ಚಿಕ್ಕ ಹುಲಿ, ಬಾಘಾ ದೊಡ್ಡದಾದಂತೆ ಅಡವಿಯಲ್ಲಿ ಅಬ್ಬರ ಮಾಡುತ್ತ ಉಳಿದ ಪ್ರಾಣಿಗಳನ್ನು ಅಂಜಿಸಿ ನಡುಗುವಂತೆ ಮಾಡಬಹುದು. ರೋಶನಿ ಕೂಡ ದೊಡ್ಡವಳಾದ ಮೇಲೆ... ಸರಿ, ಸ್ವಲ್ಪ ತಾಳಿ...

ಬೇರೆ ಬೇರೆ ಮಟ್ಟದಲ್ಲಿ ಈ ಪುಸ್ತಕವನ್ನು ಓದಬಹುದು. ಬಹಳೇ ಚಿಕ್ಕವರು ಚಿತ್ರಗಳನ್ನಷ್ಟೇ ನೋಡಬಹುದು. ಹಿರಿಯರು ನಾಟಕ ಮಾಡಿದಂತೆ ಓದುತ್ತಿದ್ದರೆ   ಮಕ್ಕಳ ಕುತೂಹಲವನ್ನು ಕೆರಳಿಸಬಹುದು. ಇಲ್ಲವೆ ಮಕ್ಕಳೇ ತಮಗೆ ಮನಬಂದಂತೆ ಓದಬಹುದು. ಸ್ವಲ್ಪ ಹೆಚ್ಚು ವಯಸ್ಸಿನ ಮಕ್ಕಳು ಚಿತ್ರಗಳನ್ನು ನೋಡುತ್ತ ಓದುತ್ತ ಹೋದಂತೆ ಅರ್ಥ ಮಾಡಿಕೊಳ್ಳಬಹುದು.

ನಾನು ಅರವಿಂದ ಗುಪ್ತಾ, ಪುಲಕ ಬಿಶ್ವಾಸ, ಮತ್ತು ವಿಶಾಖಾ ಚನಚನಿ ಇವರೆಲ್ಲರ ಪ್ರೋತ್ಸಾಹನೆಗೆ ಮತ್ತು ಮೆಚ್ಚಿಕೆಗೆ ಕೃತಜ್ಞಳಿದ್ದೇನೆ.

ನಾನು ನನ್ನ ಪತಿ ಜೋಸೆಫ ಸ್ಯಾಮ್ಯುಎಲ್ ನ ಬೆಂಬಲ ಮತ್ತು ಪ್ರೋತ್ಸಾಹನೆ ಗಾಗಿ ಋಣಿಯಾಗಿದ್ದೇನೆ.

ಸುಪರ್ಣಾ ಸಿನ್ಹಾ

ಒಂದು ದಿನ ಅಪ್ಪ, ಅಮ್ಮ ಮತ್ತು ರೋಶನಿ ಮಲಗುವ ಕೋಣೆಯ ಕಿಟಕಿಯ ಎದುರಿನ ಉದ್ಯಾನವನ್ನು ನೋಡುತ್ತ ಕುಳಿತಿದ್ದರು.

ಅಷ್ಟರಲ್ಲಿ ಅಪ್ಪಾ ಒಂದು ಬೆಕ್ಕನ್ನು ಕಂಡನು. ಅಪ್ಪಾ ಮತ್ತು ಅಮ್ಮಾ ರೋಶನಿಯನ್ನು ಅಲ್ಲಿಯೇ ಬಿಟ್ಟು ಹೊರಟು ಹೋದರು. ರೋಶನಿ ಒಬ್ಬಳೇ ಬೆಕ್ಕನ್ನು ನೋಡುತ್ತ ಕುಳಿತಳು. ಎಷ್ಟೊಂದು ಅಂದದ ಬೆಕ್ಕು! ತುಪ್ಪಳ ಮೈಮೇಲೆ ಬಣ್ಣಬಣ್ಣದ ಪಟ್ಟೆಗಳು! ಥೇಟ್ ಹುಲಿಯಂತೆಯೇ.!

ಮಧ್ಯಾನ್ಹದ ಬಿಸಿಲಿನಿಂದಾಗಿ ರೋಶನಿಗೆ ನಿದ್ದೆ ಬಂದಂತಾಗಿ ಆಕಳಿಸತೊಡಗಿದಳು. ನಿದ್ದೆಗಣ್ಣಲ್ಲಿ ಅವಳು ಒಂದು ಬಂಗಾರ ಬಣ್ಣದ ಹಾಗು ದಟ್ಟವಾದ ಗೆರೆಗಳಿರುವ ಹುಲಿಯಮ್ಮ ಆ ತೋಟದಲ್ಲಿ ಅಲೆಯುತ್ತಿರುವದನ್ನು ಕಂಡಳು. ಬಾಘಿನಿ, ಹುಲಿಯಮ್ಮ ಜೋರಾಗಿ ಆರ್ಭಟಿಸಿತು. ಪ್ರಾಣಿಗಳೆಲ್ಲ ಅಂಜಿ ನಡುಗತೊಡಗಿದವು.

ಮೃಗ ಎಂಬ ಚಿಗರೆ ಬಂಗಾರದಂತಹ ಕಂದು ಬಣ್ಣದ ಹುಲ್ಲಿನಲ್ಲಿ ಅಡಗಿಕೊಂಡಿತು.

ಮಯೂರವೆಂಬ ನವಿಲು ನದಿಯ ದಂಡೆಯ ಮೇಲಿನ ಹಚ್ಚು ಹಸಿರು ಹುಲ್ಲಿನಲ್ಲಿ ಅಡಗಿಕೊಂಡಿತು.

ಹನುಮಂತನೆಂಬ ಕೋತಿ ಹಾಗು ಅದರ ಗೆಳೆಯರೆಲ್ಲರು ತಮ್ಮ ಪುಂಡಾಟವನ್ನು ನಿಲ್ಲಿಸಿ ಮರಿಗಳನ್ನು ಅಪ್ಪಿಕೊಂಡು ಉಸುಕಿನ ದಂಡೆಯ ಹಿಂದೆ ಅಡಗಿಕೊಂಡು ಕುಳಿತರು.

ಹುಲಿಯಮ್ಮ, ಬಾಘಿನಿ, ಒಂದು ತಂಪಾದ ಮರದ ಕೆಳಗೆ ತನ್ನ ಕಾಲುಗಳನ್ನು ಚಾಚಿ ಮಧ್ಯಾನ್ನದ ನಿದ್ರೆ ಮಾಡತೊಡಗಿತು. ಅದರ ಮರಿ, ಬಾಘಾಕ್ಕೆ ತನ್ನ ತಾಯಿಯ ಬಗ್ಗೆ ತುಂಬ ಅಭಿಮಾನ. ಅದರ ತಾಯಿಯ ಒಂದೇ ಆರ್ಭಟೆ ಅಡವಿಯಲ್ಲಿದ್ದ ಎಲ್ಲರನ್ನು ಅಡಗಿಕೊಂಡು ಕೂಡಿಸಬಹುದು. ತಾನು ಕೂಡ ಅದೇ ರೀತಿ ಅಂಜಿಸಬಹುದೆಂಬ ಆಸೆ. ಆದರೆ ಬಾಘಿನಿ ಅದಕ್ಕೆ ಒಪ್ಪುತ್ತಿರಲಿಲ್ಲ.

ತನ್ನ ತಾಯಿ ಮಲಗಿದಾಗ ಯಾರನ್ನಾದರೂ ಅಂಜಿಸಬೇಕೆಂದು ಅದು ಮೆಲ್ಲನೆ ಹೊರಬಿದ್ದಿತು.

ಅಡವಿಯಲ್ಲಿ ಹುಲಿಮರಿ, ಬಾಘಾ ತಿರುಗುತ್ತಿದ್ದಾಗ ಮೃಗ ಹುಲುಸಾಗಿ ಬೆಳೆದಿದ್ದ ಒಣ ಹುಲ್ಲಿನಿಂದ ಹೊರಬಿತ್ತು.

ಮಯೂರ ನವಿಲು ನದಿ ದಂಡೆಯ ಮೇಲೆ ಬಂದು ಕುಣಿಯತೊಡಗಿತು.

ಹನುಮಂತ ಮತ್ತು ಅದರ ಗೆಳೆಯಂದಿರು ಉಸುಕಿನಿಂದ ಹೊರಬಿದ್ದು ಗಿಡಗಳ ಮೇಲೆ
ಜೋತಾಡತೊಡಗಿದರು. ಯಾರೂ ಗಾಬರಿಗೊಳ್ಳಲಿಲ್ಲ.

ಬಾಘಾ ಹುಲಿಮರಿಗೆ ಬಹಳ ಕೆಡುಕೆನ್ನಿಸಿತು. ಅದು ಗಿಡದ ಕೆಳಗೆ ಕುಳಿತು ಅಳತೊಡಗಿತು.

ಅಷ್ಟರಲ್ಲಿ ಗಿಡದ ಮೇಲಿಂದ ಒಂದು ಕಾಯಿ ಕೆಳಗೆ ಬಿತ್ತು. ಅದರ ಹಿಂದೆಯೇ ಕುಲ್ಲು ಇಣಚಿ ಬಂತು. ಬಾಘಾನನ್ನು ನೋಡಿದಾಕ್ಷಣ ಕುಲ್ಲು ಇಣಚಿ ಕಾಯಿಯನ್ನು ಮರೆತು ಬಿಟ್ಟಿತು.

ಕುಲ್ಲು ಹಿಂತಿರುಗಿ ತನ್ನ ಸುರಕ್ಷಿತೆಗಾಗಿ ಸರಸರನೆ ಗಿಡ ಹತ್ತತೊಡಗಿತು.

ಬಾಘಾನಿಗೆ ಬಹಳ ಖುಶಿಯಾಯಿತು. ತಾನು ಇಣಚಿಯನ್ನು ಹೇಗೆ ಅಂಜಿಸಿದೆ ಎಂಬ ಸುದ್ದಿಯನ್ನು ತನ್ನ ತಾಯಿ, ಬಾಘಿನಿಗೆ ತಿಳಿಸಲೆಂದು ಓಡುತ್ತಲೆ ಬಂತು.

ರೋಶನಿ ಮಬ್ಬು ನಿದ್ದೆಯಿಂದ ಎಚ್ಚರವಾಗಿ ಕಣ್ಣೊರಸುತ್ತ ನೋಡಿದಾಗ ಅವಳ ತೋಟದಲ್ಲಿಯ ಮರದ ನೆರಳಲ್ಲಿ ಒಂದು ಬೆಕ್ಕು ಕುಳಿತದ್ದು ಕಾಣಿಸಿತು.

ಚಿಕ್ಕ ಹುಲಿ

ಒಂದು ದಿನ ಅಪ್ಪ, ಅಮ್ಮ ಮತ್ತು ರೋಶನಿ ಮಲಗುವ ಕೋಣೆಯ ಕಿಟಕಿಯ ಎದುರಿನ ಉದ್ಯಾನವನ್ನು ನೋಡುತ್ತ ಕುಳಿತಿದ್ದರು. ಅಷ್ಟರಲ್ಲಿ ಅಪ್ಪಾ ಒಂದು ಬೆಕ್ಕನ್ನು ಕಂಡನು. ಅಪ್ಪಾ ಮತ್ತು ಅಮ್ಮಾ ರೋಶನಿಯನ್ನು ಅಲ್ಲಿಯೇ ಬಿಟ್ಟು ಹೊರಟು ಹೋದರು. ರೋಶನಿ ಒಬ್ಬಳೇ ಬೆಕ್ಕನ್ನು ನೋಡುತ್ತ ಕುಳಿತಳು. ಎಷ್ಟೊಂದು ಅಂದದ ಬೆಕ್ಕು! ತುಪ್ಪಳ ಮೈಮೇಲೆ ಬಣ್ಣಬಣ್ಣದ ಪಟ್ಟಿಗಳು! ಡಿಟ್ಟೋ ಹುಲಿಯಂತೆಯೇ.!

ಮಧ್ಯಾನ್ಹದ ಬಿಸಿಲಿನಿಂದಾಗಿ ರೋಶನಿಗೆ ನಿದ್ದೆ ಬಂದಂತಾಗಿ ಆಕಳಿಸತೊಡಗಿದಳು. ನಿದ್ದೆಗಣ್ಣಲ್ಲಿ ಅವಳು ಒಂದು ಬಂಗಾರ ಬಣ್ಣದ ಹಾಗು ದಟ್ಟವಾದ ಗೆರೆಗಳಿರುವ ಹುಲಿಯಮ್ಮ ಆ ತೋಟದಲ್ಲಿ ಅಲೆಯುತ್ತಿರುವದನ್ನು ಕಂಡಳು. ಬಾಘಿನಿ, ಹುಲಿಯಮ್ಮ ಜೋರಾಗಿ ಆರ್ಭಟಿಸಿತು. ಪ್ರಾಣಿಗಳೆಲ್ಲ ಅಂಜಿ ನಡುಗತೊಡಗಿದವು.

ಮೃಗ ಎಂಬ ಚಿಗರೆ ಬಂಗಾರದಂತಹ ಕಂದು ಬಣ್ಣದ ಹುಲ್ಲಿನಲ್ಲಿ ಅಡಗಿಕೊಂಡಿತು. ಮಯೂರವೆಂಬ ನವಿಲು ನದಿಯ ದಂಡೆಯ ಮೇಲಿನ ಹಚ್ಚು ಹಸಿರು ಹುಲ್ಲಿನಲ್ಲಿ ಅಡಗಿಕೊಂಡಿತು.

ಹನುಮಂತನೆಂಬ ಕೋತಿ ಹಾಗು ಅದರ ಗೆಳೆಯರೆಲ್ಲರು ತಮ್ಮ ಪುಂಡಾಟವನ್ನು ನಿಲ್ಲಿಸಿ ಮರಿಗಳನ್ನು ಅಪ್ಪಿಕೊಂಡು ಉಸುಕಿನ ದಂಡೆಯ ಹಿಂದೆ ಅಡಗಿಕೊಂಡು ಕುಳಿತರು. ಹುಲಿಯಮ್ಮ, ಬಾಘಿನಿ, ಒಂದು ತಂಪಾದ ಮರದ ಕೆಳಗೆ ತನ್ನ ಕಾಲುಗಳನ್ನು ಚಾಚಿ ಮಧ್ಯಾನ್ಹದ ನಿದ್ರೆ ಮಾಡತೊಡಗಿತು. ಅದರ ಮರಿ, ಬಾಘಾಕ್ಕೆ ತನ್ನ ತಾಯಿಯ ಬಗ್ಗೆ ತುಂಬ ಅಭಿಮಾನ. ಅದರ ತಾಯಿಯ ಒಂದೇ ಆರ್ಭಟೆ ಅಡವಿಯಲ್ಲಿದ್ದ ಎಲ್ಲರನ್ನು ಅಡಗಿಕೊಂಡು ಕೂಡಿಸಬಹುದು. ತಾನು ಕೂಡ ಅದೇ ರೀತಿ ಅಂಜಿಸಬಹುದೆಂಬ ಆಸೆ. ಆದರೆ ಬಾಘಿನಿ ಅದಕ್ಕೆ ಒಪ್ಪುತ್ತಿರಲಿಲ್ಲ.

ತನ್ನ ತಾಯಿ ಮಲಗಿದಾಗ ಯಾರನ್ನಾದರೂ ಅಂಜಿಸಬೇಕೆಂದು ಅದು ಮೆಲ್ಲನೆ ಹೊರಬಿದ್ದಿತು.

ಅಡವಿಯಲ್ಲಿ ಹುಲಿಮರಿ, ಬಾಘಾ ತಿರುಗುತ್ತಿದ್ದಾಗ ಮೃಗ ಹುಲುಸಾಗಿ ಬೆಳೆದಿದ್ದ ಒಣ ಹುಲ್ಲಿನಿಂದ ಹೊರಬಿತ್ತು.

ಮಯೂರ ನವಿಲು ನದಿ ದಂಡೆಯ ಮೇಲೆ ಬಂದು ಕುಣಿಯತೊಡಗಿತು.

ಹನುಮಂತ ಮತ್ತು ಅದರ ಗೆಳೆಯಂದಿರು ಉಸುಕಿನಿಂದ ಹೊರಬಿದ್ದು ಗಿಡಗಳ ಮೇಲೆ ಜೋತಾಡತೊಡಗಿದರು. ಯಾರೂ ಗಾಬರಿಗೊಳ್ಳಲಿಲ್ಲ.

ಬಾಘಾ ಹುಲಿಮರಿಗೆ ಬಹಳ ಕೆಡುಕೆನ್ನಿಸಿತು. ಅದು ಗಿಡದ ಕೆಳಗೆ ಕುಳಿತು ಅಳತೊಡಗಿತು.

ಅಷ್ಟರಲ್ಲಿ ಗಿಡದ ಮೇಲಿಂದ ಒಂದು ಕಾಯಿ ಕೆಳಗೆ ಬಿತ್ತು. ಅದರ ಹಿಂದೆಯೇ ಕುಲ್ಲು ಇಣಚಿ ಬಂತು. ಬಾಘಾನನ್ನು ನೋಡಿದಾಕ್ಷಣ ಕುಲ್ಲು ಇಣಚಿ ಕಾಯಿಯನ್ನು ಮರೆತು ಬಿಟ್ಟಿತು.

ಕುಲ್ಲು ಹಿಂತಿರುಗಿ ತನ್ನ ಸುರಕ್ಷಿತತೆಗಾಗಿ ಸರಸರನೆ ಗಿಡ ಹತ್ತತೊಡಗಿತು.

ಬಾಘಾನಿಗೆ ಬಹಳ ಖುಶಿಯಾಯಿತು. ತಾನು ಇಣಚಿಯನ್ನು ಹೇಗೆ ಅಂಜಿಸಿದೆ ಎಂಬ ಸುದ್ದಿಯನ್ನು ತನ್ನ ತಾಯಿ, ಬಾಘಿನಿಗೆ ತಿಳಿಸಲೆಂದು ಓಡುತ್ತಲೆ ಬಂತು.

ರೋಶನಿ ಮಬ್ಬು ನಿದ್ದೆಯಿಂದ ಎಚ್ಚರವಾಗಿ ಕಣ್ಣೊರಸುತ್ತ ನೋಡಿದಾಗ ಅವಳ ತೋಟದಲ್ಲಿಯ ಮರದ ನೆರಳಲ್ಲಿ ಒಂದು ಬೆಕ್ಕು ಕುಳಿತದ್ದು ಕಾಣಿಸಿತು.

Little Bagha

One day Appa, Ma and Roshni were looking at the garden through the bedroom window. Appa spotted a cat creeping into their garden. Appa and Ma left and Roshni sat alone watching the cat. It was a beautiful cat with lush fur and stripes just like a tiger.

The glare from the hot midday sun was making Roshni feel drowsy. She saw a huge golden tigress with dark stripes, in a dense green jungle. Baghini, the tigress roared. All the animals in the jungle shivered out of fear.

Mriga, the deer, hid in the golden brown dry grass.

Mayur, the peacock, hid in the lush green grass by the river.

Hanuman, the monkey, and his friends stopped their games and hid in the sandy bank, tightly clutching their little ones.

Baghini stretched out under a tree to take her midday nap. Her baby, Bagha, was very proud of his mother. He knew that one roar from his mother would send all the jungle folk scampering for cover. He wanted to try this too. But Baghini would not let him.

Quietly, while his mother was asleep, Bagha set off to find someone to frighten.

But as Bagha started walking through the jungle, Mriga came out of the tall dry grass.

Mayur was dancing for joy at the riverside.

Hanuman and his friends left the sand and started playing and swinging in the trees. Nobody was scared.

Bagha felt so sad that he sat under a tree and started crying.

A nut dropped from a nearby tree and close behind came Kullu, the squirrel. When he saw Bagha, Kullu forgot all about his nut.

He turned tail and ran to the safety of his tree.

Bagha was very pleased. He went running to tell Baghini how he had scared the squirrel.

Roshni rubbed her eyes to wake up and through the mist of her clouded sleepy eyes she saw a cat sitting in the shade of a huge plant in her garden.

ಚಿತ್ರಕತೆಗಳ ಬಗ್ಗೆ....

ಚಿತ್ರಕತೆಗಳು ಮಕ್ಕಳಿಗೆ ಪುಸ್ತಕ ಜಗತ್ತಿನ ಪರಿಚಯ ಮಾಡಿಕೊಡುತ್ತವೆ. ಮಕ್ಕಳನ್ನು ಮುದ್ರಿತ ಶಬ್ದಗಳೆಡೆ ಮೆಲ್ಲ-ಮೆಲ್ಲನೆ ಒಯ್ಯುತ್ತ ಓದುವ ಕುಶಲತೆಯನ್ನು ಕಲಿಸುತ್ತವೆ. ಕುತೂಹಲ ಕೆರಳಿಸುವ ಚಿತ್ರಗಳು ಕತೆಯ ಮೋಜನ್ನು ಹೆಚ್ಚಿಸುತ್ತವೆ. ಪುಟದ ಮೇಲಿನ ಕೆಲವೇ ಶಬ್ದಗಳು ಇಲ್ಲವೆ ಸಾಲುಗಳು ಚಿತ್ರ ಏನನ್ನು ಹೇಳಬಯಸುತ್ತದೆ ಎಂಬುದನ್ನು ತಿಳಿಸಿ ಹೇಳುತ್ತವೆ. ಇವೆಲ್ಲವುಗಳು ಮಕ್ಕಳಿಗೆ ಕತೆಯ ಅರ್ಥವನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತವೆ. ಇಡೀ ಆಯುಷ್ಯದಬರೆಗೆ ಒಳ್ಳೆಯ ಚಿತ್ರಕತೆಗಳ ಗೆಳೆತನ ಉಳಿಯುತ್ತದೆ.

ಏಕಲವ್ಯದ ಬಗ್ಗೆ....

ಏಕಲವ್ಯ ಇದು ಒಂದು ಸ್ವಯಂಸೇವಿ ಸಂಸ್ಥೆ ಇದೆ. ಮೂವತ್ತು ವರುಷಗಳಿಂದ ಶಿಕ್ಷಣ ಮತ್ತು ಜನವಿಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುತ್ತಲಿದೆ. ಮಕ್ಕಳ ವಿಕಾಸವನ್ನು ಪರಿಸರಕ್ಕೆ ಜೋಡಿಸಿ ಆಟ, ಕಾರ್ಯಕಲಾಪ ಮತ್ತು ರಚನಾತ್ಮಕವಾಗಿ ಮಾಡುವ ಉದ್ದೇಶವನ್ನು ಇದು ಇಟ್ಟುಕೊಂಡಿದೆ. ಈ ಕೆಲ ವರುಷ ಇದು ಪ್ರಕಾಶನ ಕ್ಷೇತ್ರದಲ್ಲಿ ಕೂಡ ಕೆಲಸ ಮಾಡುತ್ತಲಿದೆ.. ಮಕ್ಕಳಿಗಾಗಿ ಚಕಮಕ ಮತ್ತು ಸ್ರೋತ (ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ) ಹಾಗು ಶೈಕ್ಷಣಿಕ ಸಂದರ್ಭ ಎಂಬ ಪತ್ರಿಕೆಗಳನ್ನು ಪ್ರಕಾಶಿತ ಗೊಳಿಸುತ್ತಿದೆ.. ಶಿಕ್ಷಣ, ಜನವಿಜ್ಞಾನ, ಮಕ್ಕಳಲ್ಲಿ ರಚನಾತ್ಮಕ ಕಲೆ ಇವುಗಳ ಜತೆ ವಿಕಾಸಕ್ಕೆ ಸಂಬಂಧಿಸಿದ ಪುಸ್ತಕ, ಕಿರುಹೊತ್ತಿಗೆ ಪ್ರಕಾಶಿತ ಗೊಳಿಸುವದರಲ್ಲಿ ಏಕಲವ್ಯ ಕಾರ್ಯ ಮಾಡುತ್ತಲಿದೆ.

ಬಾಘಿನಿ ಹುಲಿಯಮ್ಮನ ಒಂದೇ ಆಬ್ಬರಕ್ಕೆ ಅಡವಿಯಲ್ಲಿಯ ಎಲ್ಲ ಪ್ರಾಣಿಗಳು ಜೀವ ಉಳಿಸಿಕೊಳ್ಳಲು ಚೆಲ್ಲಾಪಿಲ್ಲಿಯಾಗಿ ಓಡುತ್ತಿದ್ದವು.
ಇದರಿಂದಾಗಿ ಹುಲಿ ಮರಿ ಬಾಘಾಕ್ಕೆ ತನ್ನ ತಾಯಿಯ ಮೇಲೆ ಸಾಕಷ್ಟು ಗರ್ವವಿತ್ತು. ಆದರೆ ಬಾಘಾನಿಗೆ ಕೂಡ ಈ ಪ್ರಾಣಿಗಳನ್ನು ಬೆದರಿಸಲು ಶಕ್ಯವೇ? ಒಂದು ದಿನ ಬಾಘಾ ಇದನ್ನು ಕಂಡು ಹಿಡಿಯಲು ಹೊರಬಿತ್ತು. ಆ ಮೇಲೆ ಏನಾಯಿತು? ಯಾರಾದರೂ ಅಂಜಿದರೆ?
ಈ ಚಿಕ್ಕ ಹುಲಿಯ ಕತೆಯನ್ನು ಓದಿ ತಿಳಿದುಕೊಳ್ಳಿ.

parag

AN INITIATIVE OF TATA TRUSTS

ಏಕಲವ್ಯ

Price: ₹ 80.00

9 789385 236648